

ಪತ್ನಿಯೊಂದಿಗೆ ಪರಂಜ್ಯೋತಿ

ಪಡೆದಿದ್ದರು. ಇದರಿಂದ ಅವರು ಅನುವಾದದಲ್ಲಿ ತೊಡಗಿಕೊಳ್ಳುವುದು ಸಾಧ್ಯವಾಯಿತು. ತಮಿಳಿನ ಪೆರಿಯಾರ್ ಹಾಗೂ ತಿರುಕ್ಕುರುಳ್ ಕುರಿತು ಅವರು ಪುಸ್ತಕ ಬರೆದರು. ಅವರ ಕೃತಿಗಳಲ್ಲಿ ಕೋಡೆಮಳೆ, ಕಳಂಗ (ಆಲೂಗಡ್ಡೆ), ಚಟ್ಟೇಕಾರ (ಆಂಗ್ಲೊ ಇಂಡಿಯನ್), ಬೆಳ್ಳೈಕಾರ (ಬಿಳಿಯ), ಮೊದಲಾಳಿ (ಸಾಹುಕಾರ) ಮೊದಲಾಗಿ ನೀಲಗಿರಿ ವಿಶಿಷ್ಟವಾದ ತಮಿಳು ಪದಗಳು ಸಹಜವಾಗಿ ಬಳಕೆಯಾಗುತ್ತವೆ. ಕನ್ನಡದಲ್ಲಿ ಕರ್ನಾಟಕಕ್ಕೆ ಲಗತ್ತಾದ ನೆರೆಯ ರಾಜ್ಯದ ಒಂದು ಪ್ರದೇಶವನ್ನು ಹೀಗೆ ತಮ್ಮ ಬರಹದ ಮೂಲಕ ಕಟೆದುಕೊಡುವ ಲೇಖಕರು ಕಡಿಮೆ. ಹೀಗಾಗಿ ಪರಂಜ್ಯೋತಿಯವರ ಬರೆಹಗಳು ಕರ್ನಾಟಕ–ತಮಿಳು ಸಂಸ್ಕೃತಿಗಳ ನಡುವಣ ಸೇತುವಿನಂತೆ ಭಾಸವಾಗುತ್ತವೆ.

ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ನೀಲಗಿರಿಯಲ್ಲಿ ಬದುಕಿದ್ದ ವಲಸೆಗಾರ ಜನರ ಬದುಕಿನ ಸುಖದುಃಖಗಳನ್ನು ಕುರಿತ ವಸ್ತುವುಳ್ಳ 'ಮಂಜಿನೆಡೆಯ ಚಿತ್ರಗಳು' ಹೆಸರೇ ಹೇಳುವಂತೆ ಒಂದು ಚಿತ್ರಸಂಪುಟ. ಇಲ್ಲಿ ಲೇಖಕರ ವೈಯಕ್ತಿಕ ಬದುಕಿನ ಚಿತ್ರಗಳಿಗಿಂತ ಮಿಗಿಲಾಗಿ, ನೀಲಗಿರಿಯ ದುಡಿಮೆಗಾರರ ತಬ್ಬಲಿತನ, ಸೃಜನಶೀಲತೆ, ಉಪಾಯಗಾರಿಕೆ, ಉದ್ಯಮಶೀಲತೆಯ ಚಿತ್ರಗಳು ವಿಶೇಷವಾಗಿವೆ. ನೀಲಗಿರಿಗೆ ಬಂದು ಬದುಕನ್ನು ಕಟ್ಟಿಕೊಂಡು ಏಳಿಗೆ ಪಡೆದ ಇಲ್ಲಿನ ವ್ಯಕ್ತಿಚಿತ್ರಗಳು, ಮುಂಬೈ ಕನ್ನಡಿಗರ ವ್ಯಕ್ತಿಚಿತ್ರಗಳನ್ನು ಹೋಲುತ್ತವೆ. ಹುಲಿವೇಷದ ಪುಟ್ಟ, ಭೋಜಮೂಪ, ಲವಣಚಿಕಿತ್ಸೆಯ ಖಾನ್‌ಸಾಬು, ಟಪ್ಪಾಲುಗಾರ ಮಲೆಯಾಳಿ, ಡ್ಯಾಮಿಟ್ ಬೋರ ಮೊದಲಾದ ವ್ಯಕ್ತಿಗಳು; ಲೇಖಕರ ಪತ್ರಿಕೋದ್ಯಮ ಬದುಕಿನಲ್ಲಿ ಹಾಯುವ ಕನ್ನೆಪ್ಪಾಡಿ ರಾಮಕೃಷ್ಣ ಮೊದಲಾದವರು, ಓದುಗರ ಮನಸ್ಸಿನಲ್ಲಿ ಉಳಿದುಬಿಡುತ್ತಾರೆ. 'ನೀಲಗಿರಿ' ಕೃತಿಯಲ್ಲಿ ನೂರು ಪೌಂಡು ಟೀಸೊಪ್ಪು ಕೊಯ್ದು ದಾಖಲೆ ಮಾಡಿದ ಬೋರಮ್ಮ, ಬಸ್ ಕಂಪನಿ ನಡೆಸಿದ ರಂಗಾಮೇಸ್ತ್ರಿ, ವೈದ್ಯರಾಗಿದ್ದ ಡಾ. ಎನ್. ಬಸವಯ್ಯ, ಶಿಕ್ಷಣ ಸಂಸ್ಥೆ ಕಟ್ಟಿದ ಎನ್. ಬೋರಯ್ಯ, ಟೀ ಕಂಪನಿ ನಡೆಸಿ ಗಿರಿಯಪ್ಪಗೌಡ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ